## ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.

**ಎಸ್.ಸಿ.97/2022**

1. ಯಾದಗಿರಿ ಗ್ರಾಮೀಣ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ಮಹಾದೇವಪ್ಪ .....ಆರೋಪಿ

**ದೋಷಾರೋಪಣೆ**

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1 ಮಹಾದೇವಪ್ಪ ತಂದೆ ಭೀಮಶಪ್ಪ ತಳವಡಿ, ವಯಸ್ಸುಃ 65 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಮಲಾರ ಗ್ರಾಮ ತಾಃ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಯಾದಗಿರಿ ಗ್ರಾಮೀಣ ಪೊಲೀಸ ಠಾಣೆಯ ಹದ್ದಿಯ ಪೈಕಿ ಮಲಾರ ಗ್ರಾಮದಲ್ಲಿ ದಿಃ 21.07.2022 ರಂದು ಸಾಃ6 ಗಂಟೆಗೆ ಸಾಕ್ಷಿ ನಂ.1 ನೇದ್ದವ ಅಂದು ಮಳೆ ಆಗಿದ್ದರಿಂದ ಹತ್ತಿ ಹೊಲ ನೋಡಲು ಹೊಲಕ್ಕೆ ಹೋಗಿ ಡೋಣದ ಹತ್ತಿರ ನಿಂತು ನೀರು ನೋಡುವಾಗ ಆರೋಪಿತ ಸಾಕ್ಷಿ ನಂ.1 ನೇದ್ದವನಿಗೆ ಲೇ ಸೂಳೆ ಮಗನೆ ಡೋಣಕ್ಕೆ ಯಾಕೆ ಕಲ್ಲು ಇಟ್ಟು ನೀರು ಹೋಗುವುದನ್ನು ಮುಚ್ಚಿದಿ ಲೇ ಕಳ್ಳ ಸೂಳೆ ಮಗನೆ ಯಾವಾಗ ನೋಡಿದರು ಇದೆ ಮಾಡಿತಿ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀನು ಸಾಕ್ಷಿ ನಂ.1 ನೇದ್ದವನಿಗೆ ಮನ ಬಂದಂತೆ ಕೈಯಿಂದ ಮೈಗೆ ಗುದ್ದಿ ಗುಪ್ತಪೆಟ್ಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 323 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀವು ಸಾಕ್ಷಿ ನಂ.1 ನೇದ್ದವನಿಗೆ ಹಿಡಿಗಾತ್ರದ ಕಲ್ಲಿನಿಂದ ಹೊಡೆದು ರಕ್ತಗಾಯ ಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 324 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ ನಂ.1 ನೇದ್ದವನನು ಆರೋಪಿತನಿಗೆ ಪ್ರತಿ ವರ್ಷ ಮಳೆ ನೀರು ಡೊಣದ ಮೇಲೆ ಹೋಗುತ್ತವೆ ಹಾಗೆ ಹೋಗಲಿ ನೀನ ಯಾಕೆ ಡೋಣ ಕಡಿದು ನೀರು ಬಿಟ್ಟಿ ಅಂತ ಅಂದಾಗ ಆರೋಪಿತನು ನಿನಗೆ ಜೀವ ಸಹಿತ ಬಿಡುವುದಿಲ್ಲ ನನ್ನ ಕೈಯಾಗ ಸಿಕ್ಕಿದಿ ಅಂತಾ ಜೀವದ ಬೇದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 506 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ ನಂ.1 ನೇದ್ದವನಿಗೆ ಡೊಣಕ್ಕೆ ಕಲ್ಲು ಇಟ್ಟು ನೀರು ಹೋಗುವುದನ್ನು ಮುಚ್ಚಿದಿ ಯಾವಾಗ ನೋಡಿದರು ಇದೆ ಮಾಡತಿ ಅಂತ ಅಂದು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಅಲ್ಲೆ ಬಿದ್ದಿದ್ದ ಹಿಡಿಗಾತ್ರದ ಕಲ್ಲಿನಿಂದ ಸಾಕ್ಷಿ ನಂ.1 ನೇದ್ದವನಿಗೆ ತಲೆಗೆ ಹೊಡೆದು ರಕ್ತಗಾಯ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 307 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 07.03.2026 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.